**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ,**
**ದ.ಕ., ಮಂಗಳೂರು.**

| | |
|---|---|
| **ಎಸ್.ಸಿ.ನಂ.55/2016 ಮತ್ತು 161/2021, 80/2023, 188/2018** | |
| ಪ್ರಾ.ಸಾ.15 | ಚಾ.ಸಾ.39 |

| | |
|---|---|
| ಸಾಕ್ಷಿದಾರರ ಹೆಸರು | ಕೃಷ್ಣಮೂರ್ತಿ ವಿ |
| ತಂದೆಯ ಹೆಸರು | ದಿ. ಎನ್.ಎಂ ವೆಂಕಟಪ್ಪ |
| ಪ್ರಾಯ | 53 ವರ್ಷ |
| ಉದ್ಯೋಗ | ಪ್ರಭಾರ ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಬೆಳಗಾವಿ |
| ವಾಸಸ್ಥಳ | ಬೆಳಗಾವಿ |
| ದಿನಾಂಕ | **30.01.2025** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು. |

**ಮುಖ್ಯವಿಚಾರಣೆಃ ಸರಕಾರಿ ಅಭಿಯೋಜಕರಿಂದ.**

ನಾನು ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ದಿನಾಂಕ 05.11.2015 ರಿಂದ ಜುಲೈ 2017 ರವರೆಗೆ ಕಾರಾಗೃಹದ ಅಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 06.11.2015 ರಂದು ಈ ಪ್ರಕರಣದ ತನಿಖಾಧಿಕಾರಿಗಳು ತಕ್ಷೀರು ನಡೆದ ದಿನವಾದ ದಿನಾಂಕ 02.11.2015 ರಂದು ಹಾಜರಿದ್ದ ಸಿಬ್ಬಂದಿಗಳ ಬಗೆಗಿನ ಮಾಹಿತಿ, ಅವರನ್ನು ಕರ್ತವ್ಯಕ್ಕೆ ನಿಯೋಜಿಸಿದ ಸ್ಥಳ ಮತ್ತು ಕಾರಾಗೃಹದ ವಿಚಾರಣಾ ಬಂಧಿಗಳನ್ನು ಇಡಲಾಗಿದ್ದ ಸ್ಥಳದ ಬಗ್ಗೆ ಮಾಹಿತಿಯನ್ನು ಕೋರಿ ಪತ್ರವನ್ನು ನೀಡಿರುತ್ತಾರೆ. ನಾನು ಮರುದಿನ ಅಂದರೆ ದಿನಾಂಕ 07.11.2015 ರಂದು ಈ ಬಗ್ಗೆ ಲಿಖಿತ ಮಾಹಿತಿಯನ್ನು ಅವರಿಗೆ ನೀಡಿರುತ್ತೇನೆ. ಸಾಕ್ಷಿ ದಿನಾಂಕ 02.11.2015 ರಂದು ವಾರದ ಹಗಲು ಮತ್ತು ರಾತ್ರಿ ಕರ್ತವ್ಯಕ್ಕೆ ನಿಯೋಜಿಸಿದ್ದ ಸಿಬ್ಬಂದಿಯ ವಿವರಗಳು, ಸೆಲ್ ಮತ್ತು ಬ್ಲಾಕಗಳಲ್ಲಿ ಇಡಲಾಗಿದ್ದ ವಿಚಾರಣಾ ದಿನ ಖೈದಿಗಳ ಹೆಸರು, ತಂದೆಯ ಹೆಸರು ಮತ್ತು ಬಂಧಿಗಳ ಸಂಖ್ಯೆಯನ್ನು ದಿನಾಂಕ 07.11.2015 ರ ಕವರ್ ನೋಟಿನೊಂದಿಗೆ ನೀಡಿರುವ ದೃಢೀಕೃತ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ

ದಾಖಲೆಯನ್ನು ಒಟ್ಟಾಗಿ ನಿಪಿ-**23** ಎಂದು ಗುರುತಿಸಲಾಯಿತು.

3. ಈ ಪ್ರಕರಣದ ಎಲ್ಲ ಆರೋಪಿಗಳು ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ದಿನಾಂಕ 02.11.2015 ರಂದು ವಿಚಾರಣಾ ದಿನ ಬಂಧಿಗಳಾಗಿದ್ದರು. ಜಿಲ್ಲಾ ಕಾರಾಗೃಹದಲ್ಲಿ ನಡೆದ ತಕ್ಷೀರಿಗೆ ಸಂಬಂಧಿಸಿದ ಜಿಲ್ಲಾ ಕಾರಾಗೃಹದ ಕೆಲವು ವಿಚಾರಣಾ ದಿನ ಖೈದಿಗಳನ್ನು ನಾನು ದಿನಾಂಕ 05.11.2015 ರಂದು ಕರ್ತವ್ಯಕ್ಕೆ ಹಾಜರಾಗುವ ಪೂರ್ವದಲ್ಲಿ ಪೊಲೀಸ್ ಕಸ್ಟಡಿಗೆ ತನಿಖಾಧಿಕಾರಿಗಳು ಪಡೆದುಕೊಂಡಿರುತ್ತಾರೆ. ದಿನಾಂಕ 16.11.2015 ರಂದು ಈ ಪ್ರಕರಣದ ಮೂವರು ಆರೋಪಿಗಳನ್ನು ಪೊಲೀಸರು ಅವರ ವಾಹನದಲ್ಲಿ ನಮ್ಮ ಜಿಲ್ಲಾ ಕಾರಾಗೃಹದ ವಾಹನಕ್ಕೆ ಕರೆದುಕೊಂಡು ಬಂದು ನನಗೆ ವಿಷಯವನ್ನು ತಿಳಿಸಿದರು.

4. ಮೊದಲಿಗೆ ಇರ್ಷದ್ ಎನ್ನುವ ಆರೋಪಿತನನ್ನು ಪೊಲೀಸ್ ವಾಹನದಿಂದ ಕೆಳಗೆ ಇಳಿಸಿ ಕಾರಾಗೃಹದ ಹಳೆಯ ಜೈಲಿನ 7 ನೇ ಬ್ಲಾಕಿಗೆ ಕರೆದುಕೊಂಡು ಬಂದರು. ಅವನು ಸದರಿ ಬ್ಯಾರಾಕಿನ ಹಿಂಬಾಗ ಡ್ರೈನೇಜ್‌ಗೆ ಅಳವಡಿಸಿದ PVC ಪೈಪಿನ ಕೆಳಗೆ ಒಂದು ಮರದ ಹಿಡಿಯಿರುವ ಚೂರಿಯನ್ನು ತೆಗೆದು ಕೊಟ್ಟಿರುತ್ತಾನೆ. ಸದರಿ ಆರೋಪಿ ಈ ಚೂರಿಯಿಂದ ನಾನು ಗಣೇಶ ಶೆಟ್ಟಿಯವರಿಗೆ ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತಾನೆ. ಸದರಿ ಚೂರಿಯ ಮೇಲೆ ರಕ್ತದ ಕಲೆಗಳು ಇದ್ದವು. ಸದರಿ ಆರೋಪಿ 2 ನೇ ಸೆಲ್ ನ ಒಳಗೆ ಹೋಗಿ ಒಂದು ಕ್ರೀಮ್ ಬಣ್ಣದ ಬರ್ಮುಡ ಚಡ್ಡಿಯನ್ನು ಹಾಜರುಪಡಿಸಿ ಘಟನೆಯ ವೇಳೆಗೆ ನಾನು ಧರಿಸಿದ್ದ ಚಡ್ಡಿ ಎಂದು ನುಡಿದಿರುತ್ತಾನೆ. ಪೊಲೀಸರು ಅವುಗಳನ್ನು ಸ್ವಾಧೀನಪಡಿಸಿಕೊಂಡು, ಸೀಲ್ ಮಾಡಿಕೊಂಡು ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ.

5. ಪಂಚನಾಮೆಯನ್ನು ಮದ್ಯಾಹ್ನ 01.0 ರಿಂದ 01.45 ರವರೆಗೆ ಮಾಡಲಾಗಿರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ-17 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಅಮಾನತುಪಡಿಸಿಕೊಳ್ಳಲಾದ ಚೂರಿ ಮತ್ತು ಬರ್ಮುಡ ಚಡ್ಡಿಯನ್ನು ನೋಡಿದರೆ ಗುರುತಿಸಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಚೂರಿಯನ್ನು ಈಗಾಗಲೇ ಮು.ಮಾ-12 ಎಂದು ಗುರುತಿಸಲಾಗಿದ್ದು, ಮು.ಮಾ-12 ರ ಮೇಲಿನ ಬಿಳಿಯ ಬಣ್ಣದ ಲೇಬಲಿನಲ್ಲಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಮು.ಮಾ-12(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಈಗಾಗಲೇ ಮು.ಮಾ-27 ಎಂದು ಗುರುತಿಸಲಾಗಿದ್ದು, ಮು.ಮಾ-27 ರ ಮೇಲಿನ ಬಿಳಿಯ ಬಣ್ಣದ ಲೇಬಲಿನಲ್ಲಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಮು.ಮಾ-27(ಬಿ) ಎಂದು ಗುರುತಿಸಲಾಯಿತು.

6. ಪಂಚನಾಮೆಯ ವೇಳೆಗೆ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ 6 ಫೋಟೋಗಳನ್ನು ಈಗಾಗಲೇ ಒಟ್ಟಾಗಿ ನಿಪಿ-20 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನಿಪಿ-20 ಫೋಟೋಗಳಲ್ಲಿರುವ ಒಬ್ಬ ವ್ಯಕ್ತಿಯನ್ನು ನೋಡಿ ಅವನನ್ನು ಇರ್ಷದ್ ಎಂದು ಗುರುತಿಸಿದ್ದು, ಸಾಕ್ಷಿ ಗುರುತಿಸಿದ ಭಾಗವನ್ನು ನಿಪಿ-20(ಎ) ರಿಂದ 20(ಎಫ್) ರವರೆಗೆ ಗುರುತಿಸಲಾಯಿತು. ಸಾಕ್ಷಿ 2 ನೇ ಫೋಟೋದಲ್ಲಿ ತಮ್ಮನ್ನು ನೋಡಿ ಗುರುತಿಸಿದ್ದು, ಸದರಿ ಭಾಗವನ್ನು ನಿಪಿ-20(ಜಿ) ಎಂದು ಗುರುತಿಸಲಾಯಿತು.

7. ಅದೇ ದಿನ ಜೈಲಿನ ಆವರಣದಲ್ಲಿ ನಿಂತಿದ್ದ ವಾಹನದಿಂದ ಪೊಲೀಸರು ಮುನೀರ್ ಎಂಬ ಆರೋಪಿತನನ್ನು ಕರೆದುಕೊಂಡು ಬಂದರು. ಅವನು ನಮ್ಮನ್ನು ಹಳೆದ ಜೈಲಿನ ಮೇನ್

ಕಾಂಪೌಂಡ್ ಗೋಡೆಯ ಬಳಿಗೆ ಕರೆದುಕೊಂಡು ಹೋದ. ಅಲ್ಲಿ ಒಂದು ಕೇರಮ್ ಬೋರ್ಡಿನ ರೀಪ ಪಟ್ಟಿಯನ್ನು ತೋರಿಸಿ ಸದರಿ ಪಟ್ಟಿಯಿಂದ ಗಣೇಶ ಶೆಟ್ಟಿಗೆ ಹಲ್ಲೆ ಮಾಡಿದ್ದಾಗಿ ಹೇಳಿದ. ಬಾವಿ ಕಟ್ಟೆಯ ಮೇಲೆ ಒಣಗಿ ಹಾಕಿದ್ದ ಒಂದು ಕಪ್ಪು ಬಣ್ಣದ ಟಿಶರ್ಟನ್ನು ಹಾಜರುಪಡಿಸಿ, ನಾನು ಅದನ್ನು ಘಟನೆಯ ವೇಳೆ ಧರಿಸಿದ್ದೆ ಎಂದು ಹೇಳಿರುತ್ತಾನೆ. ಪೊಲೀಸರು ಅವುಗಳನ್ನು ಸ್ವಾಧೀನಪಡಿಸಿಕೊಂಡು, ಸೀಲ್ ಮಾಡಿಕೊಂಡು ನನ್ನ ಸಹಿಗಳನ್ನು ಪಡೆದಿರುತ್ತಾರೆ.

8. ಈ ಪಂಚನಾಮೆಯನ್ನು ಮದ್ಯಾಹ್ನ 02.00 ರಿಂದ 02.45 ರವರೆಗೆ ಮಾಡಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ-18 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಅಮಾನತುಪಡಿಸಿಕೊಂಡ ಕೇರಮ್ ಬೋರ್ಡಿನ ರೀಪ ಮತ್ತು ಟಿಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಕೇರಮ್ ಬೋರ್ಡಿನ ರೀಪನ್ನು ಈಗಾಗಲೇ ಮು.ಮಾ-28 ಎಂದು ಗುರುತಿಸಲಾಗಿದ್ದು, ಮು.ಮಾ-28 ರ ಮೇಲಿನ ಬಿಳಿಯ ಬಣ್ಣದ ಲೇಬಲಿನಲ್ಲಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಮು.ಮಾ-28(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಕಪ್ಪು ಬಣ್ಣದ ಟಿಶರ್ಟನ್ನು ಈಗಾಗಲೇ ಮು.ಮಾ-29 ಎಂದು ಗುರುತಿಸಲಾಗಿದ್ದು, ಮು.ಮಾ-29 ರ ಮೇಲಿನ ಬಿಳಿಯ ಬಣ್ಣದ ಲೇಬಲಿನಲ್ಲಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಮು.ಮಾ-29(ಬಿ) ಎಂದು ಗುರುತಿಸಲಾಯಿತು.

9. ಪಂಚನಾಮೆಯ ವೇಳೆಗೆ ಪೊಲೀಸರು ಫೊಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ 6 ಫೊಟೋಗಳನ್ನು ಈಗಾಗಲೇ ಒಟ್ಟಾಗಿ ನಿಪಿ-21 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನಿಪಿ-21 ಫೊಟೋಗಳಲ್ಲಿರುವ ಒಬ್ಬ ವ್ಯಕ್ತಿಯನ್ನು ನೋಡಿ ಅವನನ್ನು ಮುನೀರ್ ಎಂದು

ಗುರುತಿಸಿದ್ದು, ಸಾಕ್ಷಿ ಗುರುತಿಸಿದ ಭಾಗವನ್ನು ನಿಪಿ-21(ಎ) ರಿಂದ 21(ಎಫ್) ರವರೆಗೆ ಗುರುತಿಸಲಾಯಿತು. ಸಾಕ್ಷಿ 3 ಫೋಟೋಗಳಲ್ಲಿ ತಮ್ಮನ್ನು ನೋಡಿ ಗುರುತಿಸಿಕೊಂಡಿದ್ದು, ಸದರಿ ಭಾಗಗಳನ್ನು ನಿಪಿ-21(ಜಿ) ರಿಂದ 21(ಐ) ರವರೆಗೆ ಗುರುತಿಸಲಾಯಿತು.

10. ಅದೇ ದಿನ ಜೈಲಿನ ಆವರಣದಲ್ಲಿ ನಿಂತಿದ್ದ ವಾಹನದಿಂದ ಪೊಲೀಸರು ಹಾಸೀಮ್ ಎಂಬ ಆರೋಪಿತನನ್ನು ಕರೆದುಕೊಂಡು ಬಂದರು. ಅವನು ನಮ್ಮನ್ನು ಹಳೆದ ಜೈಲಿನ ಸಿಂಟೆಕ್ಸ್ ಟ್ಯಾಂಕ್ ಇಟ್ಟಿದ್ದ ಜಾಗದ ಬಳಿಗೆ ಕರೆದುಕೊಂಡು ಹೋದ. ಅಲ್ಲಿ ಒಂದು ಮರದ ರೀಪರ ಪಟ್ಟಿಯನ್ನು ತೋರಿಸಿ ಸದರಿ ಪಟ್ಟಿಯಿಂದ ಗಣೇಶ ಶೆಟ್ಟಿಗೆ ಹಲ್ಲೆ ಮಾಡಿದ್ದಾಗಿ ಹೇಳಿದ. ಸದರಿ ಸ್ಥಳದ ಪಕ್ಕದಲ್ಲಿರುವ ಹಳೆಯ ಟಾಯ್ಲೆಟ್ ಕಟ್ಟಡದ ಗೋಡೆಯ ಮೇಲೆ ಇದ್ದ ಒಂದು ಬೂದು ಬಣ್ಣದ ಪ್ಯಾಂಟ್ ಮತ್ತು ಶರ್ಟನ್ನು ಒಣಗಲು ಹಾಕಿದ್ದು ಅವುಗಳನ್ನು ಹಾಜರುಪಡಿಸಿ, ನಾನು ಅವುಗಳನ್ನು ಘಟನೆಯ ವೇಳೆ ಧರಿಸಿದ್ದೆ ಎಂದು ಹೇಳಿರುತ್ತಾನೆ. ಪೊಲೀಸರು ಅವುಗಳನ್ನು ಸ್ವಾಧೀನಪಡಿಸಿಕೊಂಡು, ಸೀಲ್ ಮಾಡಿಕೊಂಡು ನನ್ನ ಸಹಿಗಳನ್ನು ಪಡೆದಿರುತ್ತಾರೆ.

11. ಈ ಪಂಚನಾಮೆಯನ್ನು ಮದ್ಯಾಹ್ನ 03.00 ರಿಂದ 03.45 ರವರೆಗೆ ಮಾಡಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ-19 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-19(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಅಮಾನತುಪಡಿಸಿಕೊಂಡ ಮರದ ರೀಪರ ಪಟ್ಟಿ ಮತ್ತು ಬೂದು ಬಣ್ಣದ ಪ್ಯಾಂಟ್ ಮತ್ತು ಶರ್ಟಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಮರದ ರೀಪನ್ನು ಈಗಾಗಲೇ ಮು.ಮಾ-30 ಎಂದು ಗುರುತಿಸಲಾಗಿದ್ದು, ಮು.ಮಾ-30 ರ ಮೇಲಿನ ಬಿಳಿಯ ಬಣ್ಣದ ಲೇಬಲಿನಲ್ಲಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಮು.ಮಾ-30(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಬೂದು ಬಣ್ಣದ

ಪ್ಯಾಂಟ್ ಮತ್ತು ಶರ್ಟನ್ನು ಈಗಾಗಲೇ ಒಟ್ಟಾಗಿ ಮು.ಮಾ-31 ಎಂದು ಗುರುತಿಸಲಾಗಿದ್ದು, ಮು.ಮಾ-31 ರ ಮೇಲಿನ ಬಿಳಿಯ ಬಣ್ಣದ ಲೇಬಲಿನಲ್ಲಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಮು.ಮಾ-31(ಬಿ) ಎಂದು ಗುರುತಿಸಲಾಯಿತು.

12. ಪಂಚನಾಮೆಯ ವೇಳೆಗೆ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ 3 ಫೋಟೋಗಳನ್ನು ಈಗಾಗಲೇ ಒಟ್ಟಾಗಿ ನಿಪಿ-22 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನಿಪಿ-22 ಫೋಟೋಗಳಲ್ಲಿರುವ ಒಬ್ಬ ವ್ಯಕ್ತಿಯನ್ನು ನೋಡಿ ಅವನನ್ನು ಹಾಸೀಮ್ ಎಂದು ಗುರುತಿಸಿದ್ದು, ಸಾಕ್ಷಿ ಗುರುತಿಸಿದ ಭಾಗವನ್ನು ನಿಪಿ-22(ಎ) ರಿಂದ 22(ಸಿ) ರವರೆಗೆ ಗುರುತಿಸಲಾಯಿತು. ಸಾಕ್ಷಿ 2 ಫೋಟೋಗಳಲ್ಲಿ ತಮ್ಮನ್ನು ನೋಡಿ ಗುರುತಿಸಿಕೊಂಡಿದ್ದು, ಸದರಿ ಭಾಗಗಳನ್ನು ನಿಪಿ-22(ಡಿ) ಮತ್ತು 22(ಇ) ಎಂದು ಗುರುತಿಸಲಾಯಿತು.

13. ದಿನಾಂಕ 14.12.2015 ರಂದು ಪೊಲೀಸರು ನಮ್ಮ ಕಾರಾಗೃಹಕ್ಕೆ ಬಂದಿದ್ದರು. ಪೊಲೀಸರ ಜೊತೆ ಈ ಪ್ರಕರಣದ ಮತ್ತೊಬ್ಬ ಆರೋಪಿ ಮಹಮ್ಮದ್ ಇಕ್ಬಾಲ್ ಬಂದಿದ್ದ. ಹಳೆಯ ಜೈಲಿನ 5 ನೇ ಸೆಲ್ ನ ವರಾಂಡಕ್ಕೆ ಕರೆದುಕೊಂಡು ಹೋಗಿ ಹಗ್ಗದ ಮೇಲೆ ಹಾಕಿದ್ದ ಬೂದು ಬಣ್ಣದ ಚೌಕು ಗೆರೆಗಳಿರುವ ಒಂದು ಬರ್ಮುಡ ಚಡ್ಡಿಯನ್ನು ಹಾಜರುಪಡಿಸಿ ನಾನು ಘಟನೆಯ ವೇಳೆಗೆ ಸದರಿ ಚಡ್ಡಿಯನ್ನು ಧರಿಸಿದ್ದಾಗಿ ನುಡಿದಿರುತ್ತಾರೆ. ಸದರಿ ಪಂಚನಾಮೆಯನ್ನು ಸಂಜೆ 05.30 ರಿಂದ 06.00 ರವರೆಗೆ ಮಾಡಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು ನಿಪಿ-**24** ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಆರೋಪಿ ಮಹಮ್ಮದ್ ಇಕ್ಬಾಲ್ ಹಾಜರುಪಡಿಸಿದ ಬರ್ಮುಡ ಚಡ್ಡಿಯನ್ನು ನೋಡಿದರೆ ಗುರುತಿಸುತ್ತೇನೆ.

14. ಈ ದಿನ ನ್ಯಾಯಾಲಯದ ಮುಂದೆ ಬಿಳಿಯ ಬಟ್ಟೆಯಲ್ಲಿ ಹಾಕಿ ಹೊಲೆದು ಸೀಲ್ ಮಾಡಿ K-1 ಎಂಬ ವಿಶೇಷ ಗುರುತು ಇರುವ ಮತ್ತು ಬರ್ಮುಡ ಚಡ್ಡಿ ಎಂದು ಬರೆಯಲಾಗಿರುವ ಒಂದು ಸ್ವತ್ತನ್ನು ಆರೋಪಿಗಳು ಮತ್ತು ಅವರ ವಕೀಲರ ಸಮಕ್ಷಮ ತೆರೆಯಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಒಂದು ಬೂದು ಬಣ್ಣದ ಚೌಕುಳಿ ಸಣ್ಣ ಗೆರೆಗಳಿರುವ ಚಡ್ಡಿಯನ್ನು **ಮು.ಮಾ-32** ಹಾಗೂ ಲೇಬಲ್ ಮೇಲಿನ ಸಾಕ್ಷಿ ನೋಡಿ ಗುರುತಿಸಿದ ಸಾಕ್ಷಿಯ ಸಹಿಯನ್ನು ಮು.ಮಾ-32(ಎ) ಎಂದು ಗುರುತಿಸಲಾಯಿತು.

15. ದಿನಾಂಕ 02.11.2015 ರಂದು ಹಳೆಯ ಜೈಲಿನಲ್ಲಿ ಗಣೇಶ ಶೆಟ್ಟಿಯ ಕೊಲೆ ಆಗಿರುತ್ತದೆ. ನನ್ನ ಸಮಕ್ಷಮ ಪಂಚನಾಮೆಗಳನ್ನು ಗಣೇಶ ಶೆಟ್ಟಿಯ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಡಲಾಗಿರುತ್ತದೆ. ಪಂಚನಾಮಾ ಕಾಲದಲ್ಲಿ ನಾನು ಹಾಜರಿದ್ದು ಸಹಕರಿಸಿದ ಬಗ್ಗೆ ತನಿಖಾಧಿಕಾರಿಗಳು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**<u>ಪಾಟೀಸವಾಲುಃ 2 ಮತ್ತು 3ನೇ ಆರೋಪಿತರ ಪರ ಶ್ರೀ ವಿ.ಕೆ. ವಕೀಲರಿಂದ.</u>**

16. ದಿನಾಂಕ 05.11.2015 ರಂದು ಮಂಗಳೂರು ಜಿಲ್ಲಾ ಕಾರಾಗೃಹದ ಅಧೀಕ್ಷಕನಾಗಿ ನಾನು ಕರ್ತವ್ಯಕ್ಕೆ ಹಾಜರಾದ ದಿನ ಜಿಲ್ಲಾ ಕಾರಾಗೃಹದಲ್ಲಿ ಆ್ಯಂಬುಲೆನ್ಸ್ ಸೌಲಭ್ಯ ಇತ್ತು. ತನಿಖಾಧಿಕಾರಿಗಳು ದಿನಾಂಕ 06.11.2015 ರ ಕೋರಿಕೆಯನ್ನು ನನಗೆ ವೈಯಕ್ತಿಕವಾಗಿ ಸಲ್ಲಿಸಿರುತ್ತಾರೆ. ತನಿಖಾಧಿಕಾರಿಗಳು ದಿನಾಂಕ 06.11.2015 ರ ಲಿಖಿತ ಕೋರಿಕೆಯಲ್ಲಿ ದಿನಾಂಕ 02.11.2015 ರಂದು ಕರ್ತವ್ಯಕ್ಕೆ ನಿಯೋಜಿಸಲಾದ ಸಿಬ್ಬಂದಿಗಳ ವಿವರ ಮತ್ತು ಕಾರಾಗೃಹದ ಹಳೆಯ ಜೈಲಿನಲ್ಲಿ ಇಡಲಾಗಿದ್ದ ವಿಚಾರಣಾ ದಿನ ಖೈದಿಗಳ ವಿವರಗಳನ್ನು ಮಾತ್ರ ಕೇಳಿರುತ್ತಾರೆ. ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಸಿಬ್ಬಂದಿಗಳ ಹಾಜರಾತಿ ವಹಿಯನ್ನು ನಿರ್ವಹಣೆ ಮಾಡುತ್ತೇವೆ. ಹಾಜರಾತಿ ವಹಿಯ ಪ್ರತಿಗಳನ್ನು ತನಿಖಾಧಿಕಾರಿಗಳಿಗೆ ನೀಡಲು ನನಗೆ

ತೊಂದರೆ ಇರಲಿಲ್ಲ.

17. ನಿಪಿ-23 ದಾಖಲೆಯಲ್ಲಿ ಸಿಬ್ಬಂದಿಗಳಾದ ಹಿಂದಿನಮನಿ ಮತ್ತು ಜಗದೀಶ ಬೆಕ್ಕಿನಾಳ ರವರ ಕರ್ತವ್ಯ ಅವಧಿಯಲ್ಲಿ ತಿದ್ದುಪಡಿ ಮಾಡಿರುವುದು ಕಂಡುಬರುತ್ತದೆ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಹೌದು, ಆದರೆ ನಾನು ಆ ಬಗ್ಗೆ ಕೆಳಗೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನಿಪಿ-23 ದಾಖಲೆಯ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಿದ ಬಗೆಗಿನ ಮಾಹಿತಿಯನ್ನು ಡ್ಯುಟಿ ಅಲೋಟಮೆಂಟ್ ಬುಕ್ ನೋಡಿ ನೀಡಿರುತ್ತೇನೆ. ಸದರಿ ದಾಖಲೆಯಲ್ಲಿ ಯಾವ ದಾಖಲೆಯ ಆಧಾರದ ಮೇಲೆ ದಾಖಲೆಯನ್ನು ನೀಡಲಾಗಿದೆ ಎಂದು ನಾನು ನಮೂದಿಸಿರುವುದಿಲ್ಲ.

18. ಖೈದಿಗಳು ಕಾರಾಗೃಹಕ್ಕೆ ಬಂದಾಗ ಅವರ ವಿವರವನ್ನು ಕಾರಾಗೃಹದ Admission Register ನಲ್ಲಿ ನಮೂದಿಸಲಾಗುತ್ತದೆ. ಕಾರಾಗೃಹಕ್ಕೆ ಬಂದ ಖೈದಿಯ ಎಲ್ಲ ವಿವರಗಳನ್ನು ಅಂದರೆ ಹೆಸರು, ತಂದೆಯ ಹೆಸರು, ವಯಸ್ಸು, ವಿಳಾಸ, ಅವನು ಯಾವ ಪ್ರಕರಣದಲ್ಲಿ ಆರೋಪಿ ಮತ್ತು ಆತನ ದೇಹದ ಮೇಲಿನ ಗುರುತಿನ ಚಿಹ್ನೆಗಳನ್ನು ನಮೂದಿಸುತ್ತೇನೆ ಆದರೆ ಆತನನ್ನು ಯಾವ ಸೆಲ್ ಮತ್ತು ಬ್ಯಾರಾಕಿನಲ್ಲಿ ಇಡಲಾಗುತ್ತದೆ ಎಂಬ ಬಗ್ಗೆ ನಮೂದಿಸುವುದಿಲ್ಲ. ಸಾಕ್ಷಿ ಮುಂದುವರೆದು ಖೈದಿಗಳನ್ನು ಇಡಲಾಗುವ ಬ್ಯಾರಾಕ್ ಮತ್ತು ಸೆಲ್ ಗಳಲ್ಲಿ ನಿರ್ವಹಣೆ ಮಾಡಲಾಗುವ ಹಾಜರಾತಿ ದಾಖಲೆಗಳಲ್ಲಿ ಆ ಬಗ್ಗೆ ನಮೂದು ಇರುತ್ತದೆ ಎಂದು ನುಡಿಯುತ್ತಾರೆ.

19. ಬ್ಯಾರಾಕ್ ಮತ್ತು ಸೆಲ್ ಗಳ ಹಾಜರಾತಿ ದಾಖಲೆಗಳನ್ನು ಸದರಿ ಸೆಲ್ ಮತ್ತು ಬ್ಯಾರಾಕುಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿ ನಿರ್ವಹಣೆ ಮಾಡುತ್ತಾರೆ. ಸದರಿ

ದಾಖಲೆಯಲ್ಲಿ ಖೈದಿಯ UTP ಸಂಖ್ಯೆ, ಅವನ ಹೆಸರು ಮತ್ತು ಅವನ ತಂದೆಯ ಹೆಸರನ್ನು ಮಾತ್ರ ನಮೂದಿಸಲಾಗುತ್ತದೆ. ಖೈದಿಗಳನ್ನು ಒಂದು ಸೆಲ್ ಅಥವಾ ಬ್ಯಾರಾಕಿನಿಂದ ಮತ್ತೊಂದು ಕಡೆಗೆ ಸ್ಥಳಾಂತರ ಮಾಡಿದಾಗ ಮೊದಲ ಸೆಲ್ ಅಥವಾ ಬ್ಯಾರಾಕ್ ರಿಜಿಸ್ಟರಿನಲ್ಲಿ ಅವನ ಹೆಸರನ್ನು ರದ್ದು ಮಾಡಿ ಸ್ಥಳಾಂತರಿಸಿದ ಸೆಲ್ ಅಥವಾ ಬ್ಯಾರಾಕಿನ ರಿಜಿಸ್ಟರಿನಲ್ಲಿ ಅವನ ಹೆಸರನ್ನು ನಮೂದಿಸುತ್ತೇವೆ.

20. ನಾನು ನಿಪಿ-23 ರ ಖೈದಿಗಳ ವಿವರವನ್ನು ನೀಡುವ ಪೂರ್ವದಲ್ಲಿ ಆರೋಪಿಗಳು ಜೈಲಿಗೆ ಬಂದ ದಿನಾಂಕ, ಅವರುಗಳನ್ನು ಇಡಲಾದ ಸೆಲ್ ಮತ್ತು ಬ್ಯಾರಾಕುಗಳ ವಿವರಗಳನ್ನು ಪರಿಶೀಲಿಸಿ ನಂತರ ಸದರಿ ಮಾಹಿತಿಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ನಿಪಿ-23 ರಲ್ಲಿ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಸದರಿ ಮಾಹಿತಿಯನ್ನು ನೀಡಿರುವ ಬಗ್ಗೆ ಉಲ್ಲೇಖ ಇರುವುದಿಲ್ಲ. ಮನವಿ ಸಲ್ಲಿಸಿದ ನಂತರ ನಿಪಿ-23 ದಾಖಲೆಯನ್ನು ತಯಾರಿಸಿ ನೀಡಲಾಗಿರುತ್ತದೆ. ನಿಪಿ-23 ರ ಎಲ್ಲ ಪುಟಗಳಲ್ಲಿ ನನ್ನ ಸಹಿ ಮತ್ತು ಸೀಲ್ ಇರುವುದಿಲ್ಲ ಆದರೆ ಕೊನೆಯ ಪುಟದಲ್ಲಿ ಸೀಲ್ ಮತ್ತು ಸಹಿ ಇರುತ್ತದೆ. ತನಿಖಾಧಿಕಾರಿಗಳಿಗೆ ನಿಪಿ-23 ರ ಜೊತೆ ನಾನು ಪರಿಶೀಲನೆ ಮಾಡಿದ ದಾಖಲೆಗಳನ್ನು ನೀಡಲು ತೊಂದರೆ ಇರಲಿಲ್ಲ. ನಿಪಿ-23 ತನಿಖಾಧಿಕಾರಿಗಳ ಕೋರಿಕೆಯ ಮೇರೆಗೆ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾದ ದಾಖಲೆ ಎಂದರೆ ಸರಿಯಲ್ಲ.

21. ನಾನು ದಿನಾಂಕ 05.11.2015 ರ ಪೂರ್ವದಲ್ಲಿ ಹಿಂದಿನ ಅಧೀಕ್ಷಕರು ದಾಖಲೆಗಳನ್ನು ನಿರ್ವಹಣೆ ಮಾಡಿದ ಬಗ್ಗೆ ಪರಿಶೀಲನೆ ಮಾಡಿರುತ್ತೇನೆ. ತನಿಖಾಧಿಕಾರಿಗಳು ಹಿಂದಿನ ಅಧೀಕ್ಷಕರು ನಿರ್ಹಹಣೆ ಮಾಡಿದ್ದ Half Margin Full Scape ದಾಖಲೆಯನ್ನು ನನ್ನಿಂದ ಪಡೆದುಕೊಂಡಿಲ್ಲ. ತನಿಖಾಧಿಕಾರಿಗಳು ನನ್ನಿಂದ ಗೇಟ್ ರಿಜಿಸ್ಟರ್ ಅಥವಾ ನಿಪಿ-23 ನ್ನು

ಹೊರತುಪಡಿಸಿ ಬೇರೆ ದಾಖಲೆಗಳನ್ನು ಪಡೆದುಕೊಂಡಿಲ್ಲ.

22. ದಿನಾಂಕ 16.11.2015 ರಂದು ಜೈಲಿನ ಮುಖ್ಯದ್ವಾರ ಮತ್ತು ಹಳೆಯ ಜೈಲಿನಲ್ಲಿ ಸಿಸಿ ಟಿ.ವಿ ವ್ಯವಸ್ಥೆ ಇರಲಿಲ್ಲ. ಸಾಕ್ಷಿ ಮುಂದುವರೆದು ಆ ವೇಳೆಗೆ ಹೊಸ ಜೈಲಿನಲ್ಲಿ ಮಾತ್ರ ಸಿಸಿ ಟಿ.ವಿ ವ್ಯವಸ್ಥೆ ಇತ್ತು ಎಂದು ನುಡಿಯುತ್ತಾರೆ. ಆರೋಪಿಗಳು ಮತ್ತು ಪೊಲೀಸರು ಕಾರಾಗೃಹದ ಗೇಟ್ ಕೀಪರ್ ರಿಜಿಸ್ಟರಿನಲ್ಲಿ ನಮೂದಿಸಿ ಕಾರಾಗೃಹದ ಒಳಗೆ ಬಂದಿರುತ್ತಾರೆ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಆ ರೀತಿ ನಮೂದಿಸುವ ಅವಶ್ಯಕತೆ ಇರುವುದಿಲ್ಲ ಯಾಕೆಂದರೆ ನಾನು ಪಂಚನಾಮೆಗಳಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ತನಿಖಾಧಿಕಾರಿಗಳು ದಿನಾಂಕ 16.11.2015 ರಂದು ಬರುವ ಪೂರ್ವದಲ್ಲಿ ಕಾರಾಗೃಹಕ್ಕೆ ಪಂಚನಾಮೆಗಾಗಿ ಬರುತ್ತೇವೆ ಎಂದು ಮಾತ್ರ ತಿಳಿಸಿದ್ದರು ಆದರೆ ಪಂಚನಾಮೆಯ ವಿವರಗಳನ್ನು ನನಗೆ ತಿಳಿಸಿರುವುದಿಲ್ಲ, ದಿನಾಂಕ 16.11.2015 ರಂದು ಕಾರಾಗೃಹದ ಗೇಟ್ ಕೀಪರ್ ಆಗಿಹಿ ಯಾರು ಕರ್ತವ್ಯ ನಿರ್ವಹಿಸುತ್ತಿದ್ದರು ಎಂಬ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಉತ್ತರ ನೀಡಬೇಕಾಗುತ್ತದೆ.

23. ಯಾವುದೇ ವ್ಯಕ್ತಿ ಕಾರಾಗೃಹದ ಒಳಗೆ ಬರಬೇಕಾದಲ್ಲಿ ಗೇಟ್ ಕೀಪರ್ ಬಳಿಯಿರುವ ದಾಖಲೆಯಲ್ಲಿ ಸಹಿ ಮಾಡಿ ಒಳಗೆ ಬರಬೇಕಾಗುತ್ತದೆ. ಪೊಲೀಸರು ಒಂದು ದೊಡ್ಡ ವಾಹನ ಮತ್ತು ಎರಡು ಬೊಲೆರೋ ವಾಹನಗಳಲ್ಲಿ ಆ ದಿನ ಕಾರಾಗೃಹಕ್ಕೆ ಬಂದಿದ್ದರು. ದಿನಾಂಕ 16.11.2015 ರಂದು ಪಂಚನಾಮೆಗೆ ಬಂದಿದ್ದ ವೇಳೆಗೆ ಕಾರಾಗೃಹದ ಹಳೆಯ ಜೈಲಿನ ಕಟ್ಟಡದಲ್ಲಿ ವಿಚಾರಣಾ ದಿನ ಖೈದಿಗಳು ಇದ್ದರು. ದಿನಾಂಕ 16.11.2015 ರಂದು ಈ ಪ್ರಕರಣದ ತನಿಖಾಧಿಕಾರಿಯವರು ಜಿಲ್ಲಾ ಕಾರಾಗೃಹದ ಒಳಗೆ ಸ್ಥಳ ಪಂಚನಾಮೆ ಮಾಡಿದ ಬಗ್ಗೆ ನಾನು ಕಾರಾಗೃಹದ ದಾಖಲೆಯಲ್ಲಿ ನಮೂದಿಸಿರುತ್ತೇನೆ. ನಾನು ಕಾರಾಗೃಹದ DIG ರವರಿಗೆ ದಿನಾಂಕ 16.11.2015 ರಂದು ಕಾರಾಗೃಹದಲ್ಲಿ ಪಂಚನಾಮೆಯಾದ ಬಗ್ಗೆ ದೂರವಾಣಿ

ಮೂಲಕ ಮಾಹಿತಿ ನೀಡಿದ್ದು, ನಾನು ನಿರ್ವಹಣೆ ಮಾಡಿರುವ ಡೈರಿಯ ಪ್ರತಿಯನ್ನು ಸಹ ಅವರಿಗೆ ನಿವೇದಿಸಿಕೊಂಡಿರುತ್ತೇನೆ.

24. ಹಳೆಯ ಜೈಲಿನ ಕಟ್ಟಡ ಸುಮಾರು ಒಂದು ಎಕರೆ ವಿಸ್ತೀರ್ಣದ ಜಾಗದಲ್ಲಿ ಇರುತ್ತದೆ. ಚೂರಿಯನ್ನು ಜೈಲಿನ ಮುಖ್ಯ ಗೋಡೆಯ ಒಳಭಾಗದಿಂದ ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಚೂರಿಯನ್ನು ವಶಪಡಿಸಿಕೊಂಡ ಪೈಪು, ಕಾರಾಗೃಹದ ಶೌಚಾಲಯಗಳಿಂದ ಡ್ರೈನೆಜ್‌ಗೆ ಸಂಪರ್ಕ ಮಾಡುವ ಪೈಪ್ ಆಗಿರುತ್ತದೆ. ಸಾಕ್ಷಿಗೆ ನಕ್ಷೆಯನ್ನು ತೋರಿಸಲಾಗಿ, ಸಾಕ್ಷಿ ನಕ್ಷೆಯನ್ನು ನೋಡಿ 6 ನೇ ಬ್ಯಾರಾಕಿನ ಹಿಂಭಾಗ ಚೂರಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಚೂರಿಯನ್ನು ವಶಪಡಿಸಿಕೊಳ್ಳುವ ವೇಳೆಗೆ ಜೈಲಿನಲ್ಲಿದ್ದ ಇತರೆ ಖೈದಿಗಳು ಸ್ಥಳಕ್ಕೆ ಬಂದಿರಲಿಲ್ಲ. ಸ್ವತ್ತು ಸ್ವಾಧೀನತಾ ಪಂಚನಾಮೆಗಳನ್ನು ಹಳೆಯ ಕಾರಾಗೃಹದ ಆವರಣದಲ್ಲಿಯೇ ಬರೆಯಲಾಗಿರುತ್ತದ.

25. 2, 3 ಮತ್ತು 5 ನೇ ಆರೋಪಿಗಳನ್ನು ಪೊಲೀಸ್ ಕಸ್ಟಡಿಗೆ ಪಡೆಯುವ ಪೂರ್ವದಲ್ಲಿ ಯಾವ ಸೆಲ್ ಅಥವಾ ಬ್ಯಾರಾಕಿನಲ್ಲಿ ಇಡಲಾಗಿತ್ತು ಎಂಬ ಬಗ್ಗೆ ನಾನು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ. ಚೂರಿಯನ್ನು ಚೆಂಬರನಿಂದ ಡ್ರೈನೆಜ್‌ಗೆ ಕನೆಕ್ಟ ಮಾಡಲಾದ ಬೆಂಡ್ ಮಾಡಿದ ಪಿವಿಸಿ ಪೈಪಿನ ಕೆಳಗೆ ಇಡಲಾಗಿತ್ತು. ಚೂರಿಯನ್ನು ಇಡಲಾಗಿದ್ದ ಪೈಪ್ ಸ್ವಲ್ಪ ಮಣ್ಣಿನಿಂದ ಮುಚ್ಚಿಕೊಂಡಿತ್ತು. ಚೂರಿ ಕಣ್ಣಿಗೆ ಕಾಣುವಂತೆ ಇರಲಿಲ್ಲ, ಅದು ಅಡಗಿಸಿಟ್ಟಂತೆ ಇತ್ತು. ಪಿವಿಸಿ ಪೈಪ್ ಎರಡುವರೆಯಿಂದ 3 ಇಂಚಿನ ಪೈಪ್ ಆಗಿರುತ್ತದೆ. ಚೂರಿಯನ್ನು ಪೊಲೀಸರು ಅಳತೆ ಮಾಡಿರುತ್ತಾರೆ. ಆದರೆ ಅದರ ನಿಖರವಾದ ಅಳತೆ ನನಗೆ ಗೊತ್ತಿಲ್ಲ.

26. ತನಿಖಾಧಿಕಾರಿಯವರು ದಿನಾಂಕ 05.11.2015 ರಿಂದ 16.11.2015 ರವರೆಗೆ ಅಂದರೆ ಪಂಚನಾಮೆಯ ಪೂರ್ವದಲ್ಲಿ ಹಳೆಯ ಜೈಲಿನ ಕಟ್ಟಡಕ್ಕೆ ಹೋಗಿರುವುದಿಲ್ಲ ಆದರೆ ನನ್ನ ಕಚೇರಿಗೆ ಬೇರೆ ವಿಷಯಕ್ಕೆ ಬಂದಿರಬಹುದು. ದಿನಾಂಕ 05.11.2015 ರ ಪೂರ್ವದಲ್ಲಿ ತನಿಖಾಧಿಕಾರಿಗಳು ಜೈಲಿಗೆ ಎಷ್ಟು ಬಾರಿ ಬಂದಿದ್ದಾರೆ ಮತ್ತು ಏನೆಲ್ಲ ವಸ್ತುಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ.

27. ಇರ್ಷದ್ 2 ನೇ ಸೆಲ್ ನಿಂದ ಬರ್ಮುಡ ಚಡ್ಡಿಯನ್ನು ಹಾಜರುಪಡಿಸಿರುತ್ತಾನೆ. 2 ನೇ ಸೆಲ್ ನಲ್ಲಿ ಆ ದಿನ ಮೂವರು ಖೈದಿಗಳು ಬಂಧಿಯಾಗಿದ್ದರು. 2 ನೇ ಸೆಲ್‌ನಿಂದ ಬರ್ಮುಡ ಚಡ್ಡಿಯನ್ನು ಆರೋಪಿ ಇರ್ಷದ್ ಹಾಜರುಪಡಿಸುವ ಪೂರ್ವದಲ್ಲಿ ಅದು ಲಾಕ್ ಆಗಿತ್ತು. ಅಧೀಕ್ಷಕರ ಅನುಮತಿಯ ಮೇರೆಗೆ ಮಾತ್ರ ಸೆಲ್ ಮತ್ತು ಬ್ಯಾರಾಕುಗಳನ್ನು ತೆಗೆಯಬೇಕಾಗುತ್ತದೆ. ತನಿಖಾಧಿಕಾರಿಗಳು ಸೆಲ್‌ನ ಬಾಗಿಲು ತೆಗೆಯುವಂತೆ ನನ್ನ ಅನುಮತಿ ಕೋರಿರುತ್ತಾರೆ. ಸಾಕ್ಷಿ ಮುಂದುವರೆದು ನಾನು ಅವರ ಜೊತೆಯಲ್ಲೇ ಇದ್ದೆ ಎಂದು ನುಡಿಯುತ್ತಾರೆ. ಪಂಚನಾಮೆ ಮತ್ತು ಹೇಳಿಕೆಯಲ್ಲಿ ಈ ಬಗ್ಗೆ ನಮೂದು ಇರುವುದಿಲ್ಲ. 3 ನೇ ಆರೋಪಿ ಇರ್ಷದ್ ನಿಪಿ-17 ರಂತೆ ಯಾವುದೇ ಚೂರಿ ಮತ್ತು ಬರ್ಮುಡ ಚಡ್ಡಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

28. 2 ನೇ ಆರೋಪಿ ಅಬ್ದುಲ್ ಮುನೀರ್ ಕೇರಮ್ ಬೋರ್ಡ್ ಪಟ್ಟಿ ಮತ್ತು ಟಿಶರ್ಟನ್ನು ನಿಪಿ-18 ರಂತೆ ನನ್ನ ಸಮಕ್ಷಮ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 5 ನೇ ಆರೋಪಿ ಹಾಸೀಮ್ ನನ್ನ ಸಮಕ್ಷಮ ಮರದ ರೀಪು ಮತ್ತು ಬೂದು ಬಣ್ಣದ ಪ್ಯಾಂಟ್ ಮತ್ತು ಶರ್ಟಗಳನ್ನು ನಿಪಿ-19 ರಂತೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ

ಮಹಮ್ಮದ್ ಇಕ್ಬಾಲ್ ನಿಪಿ-24 ರಂತೆ ನನ್ನ ಸಮಕ್ಷಮ ಬರ್ಮುಡ ಚಡ್ಡಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-17 ರಿಂದ 19 ಮತ್ತು 24 ಪಂಚನಾಮೆಗಳು ಈ ಪ್ರಕರಣಕ್ಕಾಗಿ ತನಿಖಾಧಿಕಾರಿಗಳು ಸುಳ್ಳಾಗಿ ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನಾನು ಸದರಿ ದಾಖಲೆಗಳಿಗೆ ನನ್ನ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

29. ಸಾಮಾನ್ಯವಾಗಿ ನನ್ನ ಹುದ್ದೆಗೆ ಸಂಬಂಧಿಸಿದಂತೆ ದಾಖಲೆಗೆ ಸಹಿ ಮಾಡಿದಲ್ಲಿ ಮೊಹರನ್ನು ಸಹ ಹಾಕಬೇಕಾಗುತ್ತದೆ. ನಿಪಿ-17 ರಿಂದ 19 ಮತ್ತು 24 ರಲ್ಲಿ ನನ್ನ ಸಹಿಯ ಕೆಳಗೆ ಮೊಹರು ಇರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಲಾಗಿಲ್ಲ ಎಂದರೆ ಸರಿಯಲ್ಲ. ಮು.ಮಾ-12, 27 ರಿಂದ 32 ಸ್ವತ್ತುಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲದ ಫೋಟೋಗಳನ್ನು ಬರ್ಕೆ ಠಾಣೆಯ ಸಿಬ್ಬಂದಿ ತೆಗೆದಿರುತ್ತಾರೆ. ಕ್ಯಾಮೆರಾದಲ್ಲಿ ತೆಗೆದಿರುತ್ತಾರೆ. ಆದರೆ ಅದು ಇಲಾಖೆಗೆ ಸೇರಿದ್ದೋ ಅಥವಾ ಅವರ ವೈಯಕ್ತಿಕ ಕ್ಯಾಮೆರಾ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

30. ನಿಪಿ-20 ರಿಂದ 22 ಫೋಟೋಗಳಲ್ಲಿ ಯಾವ ಸೆಲ್ ಮತ್ತು ಬ್ಯಾರಾಕುಗಳಲ್ಲಿ ಫೋಟೋಗಳನ್ನು ತೆಗೆಯಲಾಗಿದೆ ಎಂದು ಕಂಡುಬರುವುದಿಲ್ಲ. ಸಾಕ್ಷಿ ಮುಂದುವರೆದು ಅವುಗಳನ್ನು ಸ್ವತ್ತುಗಳು ಸಿಕ್ಕ ಸ್ಥಳಗಳಲ್ಲಿ ಕಾರಾಗೃಹದ ಒಳಗೆ ತೆಗೆಯಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-20 ರಿಂದ 22 ಫೋಟೋಗಳು ತಂತ್ರಜ್ಞಾನ ಉಪಯೋಗಿಸಿ ಸೃಷ್ಟಿ ಮಾಡಲಾದ ಫೋಟೋಗಳು ಎಂದರೆ ಸರಿಯಲ್ಲ. ನಾನು ಮತ್ತು ತನಿಖಾಧಿಕಾರಿಯವರು ಒಂದೇ ಇಲಾಖೆಗೆ ಸೇರಿರುವ ಕಾರಣ, ಅವರು ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸೃಷ್ಟಿಸಿದ ಸುಳ್ಳು ದಾಖಲೆಗಳಿಗೆ ಅನುಗುಣವಾಗಿ ನಾನು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

31. ನಾನು ದಿನಾಂಕ 05.11.2015 ರಂದು ಮಂಗಳೂರು ಜಿಲ್ಲಾ ಕಾರಾಗೃಹದ ಅಧೀಕ್ಷಕನಾಗಿ ಚಾರ್ಜ ಪಡೆದುಕೊಂಡ ನಂತರ ಪ್ರತೀದಿನ ಕಾರಾಗೃಹದ ಸೆಲ್ ಮತ್ತು ಬ್ಯಾರಾಕುಗಳ ಒಳಗೆ ಪರಿಶೀಲನೆ ಮಾಡಿರುತ್ತೇನೆ, ಆದರೆ ಹೊರ ಆವರಣದಲ್ಲಿ ಹುಲ್ಲು ಬೆಳೆದಿದ್ದರಿಂದ ಅದನ್ನು ಪರಿಶೀಲಿಸಲು ಸಾದ್ಯವಾಗಿರುವುದಿಲ್ಲ. ನಾನು ಚಾರ್ಜ ಪಡೆಯುವ ಪೂರ್ವದಲ್ಲಿ ಮತ್ತು ಚಾರ್ಜ ಪಡೆದ ನಂತರ ಮಂಗಳೂರು ಜಿಲ್ಲಾ ಕಾರಾಗೃಹದ ಒಳಗೆ ಹೊರಗಿನಿಂದ ಗಾಂಜಾ ಪ್ಯಾಕೇಟ್ ಮತ್ತು ಮಾರಕಾಸ್ತ್ರಗಳನ್ನು ಎಸೆಯುತ್ತಾರೆ ಎಂಬ ಬಗ್ಗೆ ಪ್ರಕರಣಗಳು ದಾಖಲಾಗಿದ್ದವು ಎಂದರೆ ಸರಿ.

**ಪಾಟೀಸವಾಲುಃ ಉಳಿದ ಎಲ್ಲಾ ಆರೋಪಿತರ ಪರ ವಕೀಲರಿಂದ.**

ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.